ಇಂದು ದಿನಾಂಕಃ 03.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ವಾದಿಯ ಪರ ಶ್ರೀ. ಬಿ.ಎನ್.ಬಿ. ವಕೀಲರಿಂದಃ

1. ಪ್ರತಿವಾದಿ 1 ನನ್ನ ತಂದೆ, ಅವರು ಪೋತಿಯಾಗಿ ಸುಮಾರು 6 ವರ್ಷಗಳಾಯಿತು. ಪ್ರತಿವಾದಿ 1ರವರಿಗೆ ನಾನು ಒಬ್ಬಳೇ ಮಗಳು. ನನ್ನ ಮದುವೆಯಾಗಿದ್ದು, ನನ್ನ ಗಂಡನ ಮನೆ ಮಾಸೂರು. ನನ್ನ ಗಂಡನಿಗೆ ಊರಲ್ಲಿ ಮನೆ ಇರುತ್ತದೆ. ನಾನು ನನ್ನ ಗಂಡನ ಮನೆಯಲ್ಲಿ ಇಲ್ಲ, ತಂದೆ ತಾಯಿ ಜೊತೆ ವಾಸವಾಗಿದ್ದೇನೆ. ಪ್ರತಿವಾದಿ 1 ರವರಿಗೆ ಪಟ್ಟಣ ಪಂಚಾಯಿತಿಯಿಂದ ಮಂಜೂರಾದ ಆಸ್ತಿ ನಂಬರಃ 1441. ಸದರಿ ಆಸ್ತಿ ದಾವಾ ಆಸ್ತಿ ಅಲ್ಲ ಎಂದರೆ ಸರಿ. ವಾದಿಯು ಆಸ್ತಿ ನಂಬರಃ 1949 ರ ಮೇಲೆ ದಾವಾ ಹೂಡಿರುತ್ತಾರೆ ಎಂದರೆ ಸರಿ.

2. ಸದರಿ ಆಸ್ತಿಯು ವಾದಿಯರಿಗೆ 1998 ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ವಾದಿಯರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಪಂಚಾಯತಿಯ ಕಟ್ಟಾ ಪ್ರಕಾರ ದಾವಾ ಆಸ್ತಿಗೆ ವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ವಾದಿಯು ಪೋತಿಯಾಗಿ ಸುಮಾರು 5 ವರ್ಷಗಳಾಗಿವೆ. ಈಗ ವಾದಿಯು 1(ಎ) ರಿಂದ (ಸಿ) ರವರು ದಾವಾ ಆಸ್ತಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಮಾದೇವಕ್ಕ ಮಂಜಪ್ಪ ಸುಣಗಾರ @ ಬಾರ್ಕಿರವರ ಮನೆ, ಪಶ್ಚಿಮಕ್ಕೆ ಗೌರಮ್ಮ ರಾಮಪ್ಪ ತಳಕಟ್ಟಿರವರ ಮನೆ, ಉತ್ತರಕ್ಕೆ ಪಂಚಾಯತಿ ರಸ್ತೆ ಮತ್ತು ದಕ್ಷಿಣಕ್ಕೆ ಸುಭಾಶಪ್ಪ ರಾಟಿಮನೆರವರ ಮನೆ ಇರುತ್ತದೆ.

3. ಪ್ರತಿವಾದಿ 1ರವರ ಆಸ್ತಿ ನಂಬರಃ 1441ರ ಪೂರ್ವಕ್ಕೆ ಪ್ಲಾಟ್ ನಂಬರಃ 114, ಪಶ್ಚಿಮಕ್ಕೆ ಪ್ಲಾಟ್ ನಂಬರಃ 116, ಉತ್ತರಕ್ಕೆ ರಿ.ಸ. ನಂಬರಃ 135ರ ಉಳಿದ ಭಾಗ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಪ್ಲಾಟ್ ನಂಬರಃ 114 ಮತ್ತು 116 ಯಾರ ಆಸ್ತಿ ಎಂದು ನನಗೆ ಗೊತ್ತಿಲ್ಲ. ರಿ.ಸ. ನಂಬರಃ 135ರ ಉಳಿದ ಭಾಗದಲ್ಲಿ ಮನೆ ಇದ್ದು, ಅಲ್ಲಿ ಯಾರು ಇರುತ್ತಾರೆ ಎಂದು ಹೇಳಲಾಗುವುದಿಲ್ಲ. ನಿಪಿ-16 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ-16ರ ಮೂಲ ಪ್ರತಿಯನ್ನು ಪ್ರತಿವಾದಿ 1 ರವರು ಅಸಲು ದಾವಾ ನಂಬರಃ 60/2005ರಲ್ಲಿ ಹಾಜರುಪಡಿಸಿದ್ದರು ಎಂದರೆ ಸರಿ. ನಿಪಿ-16 ರಲ್ಲಿ ಪ್ಲಾಟ್ ನಂಬರಃ 114 ಎಂದು ಬರೆದು, ಅದನ್ನು ತಿದ್ದುಪಡಿ ಮಾಡಿ 115 ಎಂದು ಬರೆದಿರುತ್ತಾರೆ ಎಂದರೆ ಸರಿ. ಮತ್ತು ಸದರಿ ಆಸ್ತಿಯ ಸರ್ವೇ ನಂಬರ ತೋರಿಸಿಲ್ಲ ಎಂದರೆ ಸರಿ.

4. ನಿಪಿ-16 ರಲ್ಲಿ ಪಂಚಾಯತಿ ಕಾರ್ಯದರ್ಶಿಯ ಸಹಿ ಇಲ್ಲ ಎಂದರೆ ಸರಿ. ನಿಪಿ-9 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ನಿಪಿ-9 ರಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಯ ಸಹಿ ಇದೆ ಎಂದರೆ ಸರಿ. ನಿಪಿ-10 ರ ಪ್ರಕಾರ ವಾದಿಯರಿಗೆ ವಸತಿ ಯೋಜನೆಅಡಿ ಮನೆ ಕಟ್ಟಲು ತಾಲೂಕು ಪಂಚಾಯತ ಪರವಾನಿಗೆ ನೀಡಿದ್ದರು ಎಂದರೆ ಸರಿ. ವಾದಿಯರಿಗೆ ಮತ್ತು ನಮಗೆ ಮಂಜೂರಾದ ಆಸ್ತಿಗಳು ಬೇರೆ ಬೇರೆ ಎಂದರೆ ಸರಿ. ನಿಪಿ-23 ರ ಪ್ರಕಾರ ಪಂಚಾಯತಿ ನಮ್ಮ ಆಸ್ತಿ ಅಸ್ತಿತ್ವದಲ್ಲಿಲ್ಲ ಎಂದು ದೃಢೀಕರಣ ಪತ್ರ ಕೊಟ್ಟಿರುತ್ತಾರೆ ಸರಿಯಲ್ಲ.

5. ನಿಪಿ-21ರ ಪ್ರಕಾರ ಪ್ರತಿವಾದಿ 1ರವರು ದುಡಿಯುವುದಕ್ಕೆ ಬೇರೆ ಕಡೆ ಹೋದಾಗ, ಆಸ್ತಿಯ ಕಬ್ಜಾ ತೆಗೆದುಕೊಳ್ಳದೇ ಇದ್ದಿದ್ದರಿಂದ ಆಸ್ತಿಯನ್ನು ಬೇರೆಯವರಿಗೆ ಕೊಟ್ಟಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದೇಶ್ವರ ನಗರದಲ್ಲಿರುವ ಖಾಲಿ ಜಾಗಗಳನ್ನು ಪ್ಲಾಟ್ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಈ ಹಿಂದೆ ಪ್ರತಿವಾದಿ 1 ರವರು ಸಲ್ಲಿಸಿದ ದಾವಾ ನಂಬರಃ 60/2005 ರಲ್ಲಿ ಆಸ್ತಿ ನಂಬರಃ 1949 ರ ಬಗ್ಗೆ ಇಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಆಸ್ತಿ ನಂಬರಃ 1441 ಮತ್ತು 1949 ಎರಡು ಒಂದೇ ಎಂದು ಪರಿಗಣಿಸಲು ಕೇಳಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ವಾದಿಯರು ಆಸ್ತಿ ನಂಬರಃ 1949 ಕ್ಕೆ ಮಾಲೀಕರು ಎಂದು ಠರಾಯಿಸಲು ಮಾಗಣಿ ಮಾಡಿದ್ದು, ಅದಕ್ಕೆ ನಮ್ಮ ಯಾವುದೇ ತಕರಾರು ಇಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.